## ಮುರುಘಾ ಮಠದಿಂದ ಹೆಚ್ ಐ ವಿ ಪೀಡಿತರು, ಅಡುಗೆ ಕೆಲಸದವರಿಗೆ ಆಹಾರ ಕಿಟ್ ವಿತರಣೆ

**ಚಿತ್ರದುರ್ಗ, ಜೂ.-02** ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಆವರಣದಲ್ಲಿ ಬುಧವಾರ ಡಾ. ಶಿವಮೂರ್ತಿ ಮುರುಘಾ ಶರಣರು, ಕೋವಿಡ್ ಸಂಕಷ್ಟದಲ್ಲಿರುವ ಹೆಚ್.ಐ.ವಿ. ಪೀಡಿತರು, ಅಡುಗೆ ಕೆಲಸಗಾರರು, ದೇವಸ್ಥಾನಗಳ ಅರ್ಚಕರು, ವಿವಿಧೆಡೆ ಕೆಲಸ ಮಾಡುವ ದಿನಗೂಲಿ ಕಾರ್ಮಿಕರು ಸೇರಿದಂತೆ 110ಜನರಿಗೆ ಆಹಾರ ಧಾನ್ಯದ ಕಿಟ್‌ಗಳನ್ನು ವಿತರಿಸಿದರು. ಇಂದಿನ ದವಸ ಧಾನ್ಯ ದಾಸೋಹವನ್ನು ಶ್ರೀಮತಿ ಪಾರ್ವತಮ್ಮ ಮತ್ತು ಜಯಣ್ಣ, ಇಂಜಿನಿಯರ್, ಬೆಂಗಳೂರು ಹಾಗು ಕಡೂರು ಶ್ರೀ ವೀರಭದ್ರಸ್ವಾಮಿ ದೇವಸ್ಥಾನ ಸಮಿತಿ ಉಪಾಧ್ಯಕ್ಷ ಹೆಚ್.ಎಂ. ದಯಾನಂದಸ್ವಾಮಿ ಇವರು ವಹಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಪಟೇಲ್ ಶಿವಕುಮಾರ್, ಸಿದ್ದಾಪುರ ನಾಗಣ್ಣ, ಪೈಲ್ವಾನ್ ತಿಪ್ಪೇಸ್ವಾಮಿ ಮೊದಲಾದವರಿದ್ದರು.









ಬಸವಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಪರಮಪೂಜ್ಯ ಶ್ರೀಶ್ರೀಶ್ರೀ